ಶ್ರೀ ಪಿ.ಜಿ.ಆರ್. ಸಿಂಧ್ಯ:- ಇವೊತ್ತು ಸುಮಾರು ೫೫ ಲಕ್ಷ ಜನರು ಸಾರಿಗೆ ಸಂಸ್ಥೆ ಬಸ್ಸಿನಲ್ಲಿ ಪ್ರಯಾಣ ಮಾಡುತ್ತಿದ್ದಾರೆ. ಆದುದರಿಂದ, ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ನಿಲುವಳಿ ಸೂಚನೆಗೆ .....

ಅಧ್ಯಕ್ಷರು:- ಇದರ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆಂದು ನಾನು ಮೊದಲೇ ಹೇಳಿದ್ದೇನೆ. ಈಗ ಕಲಾಪ ನಡೆಸುವುದಕ್ಕೆ ದಯವಿಟ್ಟು ಮಾನ್ಯ ಸದಸ್ಯರುಗಳೆಲ್ಲರೂ ಸಹಕರಿಸಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ:- ಸರ್ಕಾರ, ಸಭಾ ನಾಯಕರು ಒಪ್ಪಿದರೆ ಪ್ರಶ್ನೋತ್ತರ ಅವಧಿಯನ್ನು ಸಸ್ಪೆಂಡ್ ಮಾಡಿ ನಿಲುವಳಿ ಸೂಚನೆ ಮುಖಾಂತರ ಕೆ.ಎಸ್.ಆರ್.ಟಿ.ಸಿ. ದರ ಏರಿಕೆ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ:- ಮಾನ್ಯ ವಾಟಾಳ್ ನಾಗರಾಜ್‌ರವರೆ, ನೀವು ಪ್ರತಿದಿನ ಇದೇ ರೀತಿ ಕಪ್ಪು ವಸ್ತ್ರವನ್ನು ಉಪಯೋಗಿಸಿದರೆ ಕಪ್ಪು ವಸ್ತ್ರದ ಕ್ರಯ ಜಾಸ್ತಿಯಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್:- ಇವೊತ್ತು ಸರ್ಕಾರ, ನಾಡಿನ ಜನತೆ ಕಗ್ಗತ್ತಲೆಯಲ್ಲಿರುವುದರ ಸಂಕೇತ ಈ ಕಪ್ಪು ವಸ್ತ್ರ. ಈ ರೀತಿ ಆಗಬಾರದು. ನಾನೇನು ತಿಳಿದುಕೊಂಡಿದ್ದೆ ಎಂದರೆ, ಶ್ರೀಮಾನ್ ವೀರಪ್ಪ ಮೊಯಿಲಿಯವರು ಮುಖ್ಯಮಂತ್ರಿಗಳಾಗಿ ಅಧಿಕಾರಕ್ಕೆ ಬಂದಾಗ ನಿಜವಾಗಲೂ ರಾಜ್ಯಕ್ಕೆ ಹೊಸದಾದ ಒಂದು ಆಯಾಮ ಕೊಡುತ್ತಾರೆ, ಬಡವರ ಬಗ್ಗೆ ಚಿಂತನೆ ಮಾಡುತ್ತಾರೆಂದುಕೊಂಡಿದ್ದೆ. ಆದರೆ, ತಾವು ಬಡವರ ಬೆನ್ನು ಮುರಿಯುವುದಕ್ಕೆ ಹೊರಟಿದ್ದೀರಿ.

ಶ್ರೀ ಎಂ. ವೀರಪ್ಪ ಮೊಯಿಲಿ:- ಸನ್ಮಾನ್ಯ ವಾಟಾಳ್ ನಾಗರಾಜ್‌ರವರೇ, ನಿಲುವಳಿ ಸೂಚನೆ ಬಂದಾಗ ಕಾದು ನೋಡಿ. ಏಕೆಂದರೆ, ಪ್ರಶ್ನೋತ್ತರ ವೇಳೆ ಎನ್ನುವುದು ಸದಸ್ಯರುಗಳ ಒಂದು ಮೂಲಭೂತವಾದಂಥ ಹಕ್ಕಿನ ವಿಚಾರವಾಗಿದೆ. ಪ್ರಶ್ನೆಗಳನ್ನು ಕಳುಹಿಸುವುದಕ್ಕೆ ಸದಸ್ಯರುಗಳು ಬಹಳ ಶ್ರಮ ವಹಿಸುತ್ತಾರೆ, ಅಂತೆಯೇ ಪ್ರಶ್ನೆಗಳಿಗೆಲ್ಲಾ ಸರ್ಕಾರ ಉತ್ತರ ಕೊಟ್ಟಿದೆ. ಆದುದರಿಂದ ಕ್ರಮವಾಗಿ ಕಲಾಪ ನಡೆಯಲಿ. ನಿಲುವಳಿ ಸೂಚನೆ ಬಂದಾಗ ಅದರ ವಿಷಯ ಎತ್ತುವುದಕ್ಕೆ ನಾವೇನೂ ಆಕ್ಷೇಪ ಮಾಡುವದಿಲ್ಲ, ಅದರ ಬಗ್ಗೆ ಚರ್ಚೆಯಾಗಲಿ. ಚರ್ಚೆಗೆ ನಾವು ಯಾವುದೇ ರೀತಿಯಲ್ಲಿ ತೊಂದರೆಯುಂಟು ಮಾಡುವುದಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ:- ನೀವು ಕೆಟ್ಟ ಆಡಳಿತಕ್ಕೆ ಶಸ್ತ್ರಚಿಕಿತ್ಸೆ ಮಾಡುತ್ತೇವೆಂದು ಹೇಳಿದವರೆ ಈಗ ಬಡ ಜನರ ಜೇಬಿಗೆ ಶಸ್ತ್ರಚಿಕಿತ್ಸೆ ಮಾಡಿದ್ದೀರಿ. ಇದನ್ನು ನಿಜವಾಗಿಯೂ ರಾಜ್ಯದ ಜನತೆ ಸಹಿಸುವುದಿಲ್ಲ, ಜನರು ಶಾಪ ಹಾಕುತ್ತಿದ್ದಾರೆ.

ಸಂತಾಪ ಸೂಚನೆಗಳು

ಅಧ್ಯಕ್ಷರು: ವಿಧಾನ ಸಭೆಯ ಮಾಜಿ ಸದಸ್ಯರಾದ ಶ್ರೀ ಜಿ.ಸಿ. ಪಾಟೀಲ್ ಹಾಗೂ ವಿಶ್ವವಿಖ್ಯಾತ ಕಲಾವಿದ ಪದ್ಮಭೂಷಣ ಡಾ. ಸ್ಟೆಟೋಸ್ಲಾವ್ ರೋರಿಕ್‌ರವರ ನಿಧನದ ಸುದ್ದಿಯನ್ನು ಈ ಸದನಕ್ಕೆ ತಿಳಿಸಲು ವಿಷಾದಿಸುತ್ತೇನೆ.

ವಿಧಾನ ಸಭೆಯ ಮಾಜಿ ಸದಸ್ಯರಾದ ಶ್ರೀ ಜಿ.ಸಿ. ಪಾಟೀಲ್‌ರವರು ದಿನಾಂಕ ೯-೨-೧೯೯೩ ರಂದು ನಿಧನರಾದರು. ವೃತ್ತಿಯಲ್ಲಿ ಕೃಷಿಕರು ಹಾಗೂ ವಕೀಲರು. ಶ್ರೀಯುತರು ೧೯೭೨ ರಿಂದ ೧೯೭೭ರ ಅವಧಿಯಲ್ಲಿ ಕಲಘಟಗಿ ಕ್ಷೇತ್ರವನ್ನು ಪ್ರತಿನಿಧಿಸಿ ಸೇವೆ ಸಲ್ಲಿಸಿರುವುದರ ಜೊತೆಗೆ ಕಲಘಟಗಿ ತಾಲ್ಲೂಕು ಅಭಿವೃದ್ಧಿ ಮಂಡಳಿ ಸದಸ್ಯರಾಗಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಹಕಾರ ಸಂಘದ ನಿರ್ದೇಶಕರಾಗಿ ಹಾಗೂ ಧಾರವಾಡ ರೋಟರಿ ಕ್ಲಬ್ಬಿನ ಸದಸ್ಯರಾಗಿ ಸಮಾಜದ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸಿರುತ್ತಾರೆ. ಪದ್ಮಭೂಷಣ ಪ್ರಶಸ್ತಿ ವಿಜೇತ

ಹಾಗೂ ರಷ್ಯಾದ ಸೃಜನಶೀಲ ಕಲಾವಿದರಾದ ಡಾ. ಸ್ಟೆಟೋಸ್ಲವ್ ರೋರಿಕ್‌ವರು ದಿನಾಂಕ ೩೦-೦೧-೧೯೬೩ ರಂದು ನಿಧನರಾದರು.

ಮಹಾನ್ ಕಲಾವಿದರಾಗಿದ್ದ ರೋರಿಕ್‌ರವರು ಭಾವಚಿತ್ರ ರಚನೆಯಲ್ಲಿ ಖ್ಯಾತಿ ಗಳಿಸಿದ್ದವರು. ಶ್ರೀಯುತರು ಬರೆದ ಮಹಾತ್ಮ ಗಾಂಧಿ, ಜವಹರಲಾಲ್ ನೆಹರು ಹಾಗೂ ಶ್ರೀಮತಿ ಇಂದಿರಾ ಗಾಂಧಿಯವರ ಭಾವಚಿತ್ರಗಳು ಪಾರ್ಲಿಮೆಂಟ್ ಭವನದ ಗೋಡೆಗಳಲ್ಲಿ, ಅಲಂಕೃತವಾಗಿವೆ. ಅಂತರರಾಷ್ಟ್ರೀಯ ಭೂಮಿಕೆಯಲ್ಲಿ ಖ್ಯಾತಿ ಗಳಿಸಿರುವ ಅವರ ಚಿತ್ರಗಳು ವಿಶ್ವದ ಪ್ರಮುಖ ಆರ್ಟ್ಸ್‌ಗ್ಯಾಲರಿಗಳು, ಖಾಸಗಿ ಸಂಗ್ರಹಗಳು, ಖ್ಯಾತಿ ಪತ್ರಿಕೆಗಳು ಹಾಗೂ ಪೋಸ್ಟ್ ಕಾರ್ಡ್‌ಗಳಲ್ಲಿ ಪುನರುತ್ಪತ್ತಿ ಕಾಣುತ್ತಲೇ ಇವೆ. ಶ್ರೀಯುತರ ಕಲಾ ಹಿರಿಮೆಗಾಗಿ ಭಾರತ ಸರ್ಕಾರದಿಂದ ಪದ್ಮಭೂಷಣ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕಲ್ಕತ್ತಾ ಕಲಾ ಸಂಘದಿಂದ ಚಿನ್ನದ ಪದಕ ಹಾಗೂ ರಾಜ್ಯ ಪರಿಷತ್ತಿನ ಗೌರವವನ್ನು ನೀಡಿ ಪುರಸ್ಕರಿಸಲಾಗಿತ್ತು.

ಮೃತರ ಗೌರವಾರ್ಥ ಮಾನ್ಯ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು:- ಸದನ ಅಂಗೀಕರಿಸಿದ ನಿರ್ಣಯವನ್ನು ಮೃತರ ಕುಟುಂಬದವರಿಗೆ ಕಳುಹಿಸಿಕೊಡಲಾಗುವುದು.

ಪ್ರಶ್ನೋತ್ತರ.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ವಿಷಯ:- ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಹುದ್ದೆಗಳ ಭರ್ತಿ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೧:- (೪೯೮)
ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ)
ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಸಾವಿರಾರು ಹುದ್ದೆಗಳು ಖಾಲಿ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?
ಆ) ಹಾಗಿದ್ದಲ್ಲಿ ಯಾವ ಯಾವ ಇಲಾಖೆಯಲ್ಲಿ (ನಿಗಮ, ಮಂಡಳಿ, ವಿಶ್ವ ವಿದ್ಯಾನಿಲಯ ಸೇರಿದಂತೆ) ಯಾವ ಯಾವ ದರ್ಜೆಯ ಹುದ್ದೆಗಳು ಖಾಲಿ ಇವೆ?
ಇ) ಈ ಮೇಲ್ಕಂಡ ಖಾಲಿ ಹುದ್ದೆಗಳನ್ನು ಭರ್ತಿ ಮಾಡದೇ ಇರಲು ಕಾರಣಗಳೇನು?
ಈ) ಎಷ್ಟು ಸಮಯದೊಳಗಾಗಿ ಖಾಲಿ ಇರುವ ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡಲಾಗುವುದು?

ಶ್ರೀ ಎಂ. ವೀರಪ್ಪ ಮೊಯಿಲಿ
(ಮುಖ್ಯಮಂತ್ರಿಗಳು)

ಬಂದಿದೆ.

ಸಿದ್ಧವಾದ ವಿವರಗಳು ಸದ್ಯಕ್ಕೆ ಲಭ್ಯವಾಗಿರುವುದಿಲ್ಲ.

ಆರ್ಥಿಕ ಮಿತವ್ಯಯ ಹಾಗೂ ನೇರ ನೇಮಕಾತಿ ನಿರ್ಬಂಧ ಆದೇಶ ಜಾರಿಯಲ್ಲಿರುವುದರಿಂದ.

ಅಗತ್ಯತೆಯ ಆಧಾರದ ಮೇಲೆ ರಿಕ್ತ ಸ್ಥಾನಗಳನ್ನು ಈಗಲೂ ಭರ್ತಿ ಮಾಡಬಹುದಾಗಿದೆ.